## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.1255/2024

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀ ಮೊಹಮ್ಮದ್ ಸಾದಾತುಲ್ಲಾ | ಸಿ.ಡಬ್ಲ್ಯು–1 |
| ತಂದೆಯ ಹೆಸರು | ಮೊಹಮ್ಮದ್ ಸಮಿವುಲ್ಲಾ | ಪಿ .ಡಬ್ಲ್ಯೂ–1 |
| ವಯಸ್ಸು | 39 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಅಬಕಾರಿ ನಿರೀಕ್ಷಕರು, ಬಳ್ಳಾರಿ | ದಿನಾಂಕಃ |
| ವಾಸಃ | ಬಳ್ಳಾರಿ | 12.01.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ನಾನು ದಿನಾಂಕ 04.02.2024 ರಿಂದ 11.06.2024 ರವರೆಗೆ ಶಿವಮೊಗ್ಗದ ಅಬಕಾರಿ ಉಪ ಆಯುಕ್ತರ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕರು ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

**2.** ದಿನಾಂಕ 04.05.2024 ರಂದು ಸಾರ್ವತ್ರಿಕ ಲೋಕಸಭಾ ಚುನಾವಣೆಯ ನೀತಿ ಸಂಹಿತೆಯ ಜಾರಿ ಹಿನ್ನಲೆಯಲ್ಲಿ ಸಾಗರ ಟೌನ್ ಬಸ್ ನಿಲ್ದಾಣದ ಬಳಿ ನಾನು ಸಿಬ್ಬಂದಿಯೊಂದಿಗೆ ಗಸ್ತು ಮಾಡುತ್ತಿದ್ದೆ. ಆಗ ಸಂಜೆ 07.50 ರ ಸುಮಾರಿಗೆ ದೂರವಾಣಿ ಮೂಲಕ ಒಂದು ಬಾತ್ಮೀ ಬಂದಿತು. ಸದರಿ ಬಾತ್ಮೀಯಲ್ಲಿ ಷಣ್ಮುಖ ಎಂಬ ವ್ಯಕ್ತಿಯು ತನ್ನ ಹಿರೋ ಹೊಂಡಾ ಸ್ಲೇಂಡರ್ ನೊಂದಣಿ ಸಂಖ್ಯೆ ಕೆಎ–14/ಇಇ–5469 ರಲ್ಲಿ ಅಕ್ರಮವಾಗಿ ಮಧ್ಯವನ್ನು ಸಾಗಾಣಿಕೆ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿತು. ಕೂಡಲೇ ನಾವು ಅಲ್ಲಿಂದ ಹೊರಟು ಸಾಗರದ ಸಿಗಂಧೂರಿನ ಕ್ರಾಸ್ ನ ಬಳಿ ನಿಂತಿದ್ದ ಚಾ.ಸಾ 2 ಮತ್ತು 3 ರವರಿಗೆ ಬಾತ್ಮೀ ವಿಷಯ ತಿಳಿಸಿ ದಾಳಿಗೆ ಸಹಕರಿಸುವಂತೆ ತಿಳಿಸಿ ಅವರು ಒಪ್ಪಿಕೊಂಡ ಮೇರೆಗೆ ನಾವೆಲ್ಲರೂ ಇಲಾಖಾ ವಾಹನದಲ್ಲಿ ಸಾಗರ–ಶಿವಮೊಗ್ಗ ರಸ್ತೆಯ ಗಣಪತಿ ಕೆರೆಯ ಬಳಿ ಹೋಗಿ ರಸ್ತೆಗಾವಲು ಮಾಡುತ್ತಿದ್ದೆವು. ರಾತ್ರಿ 08.30 ಗಂಟೆ ಸುಮಾರಿಗೆ ಬಾತ್ಮೀಯಲ್ಲಿ ತಿಳಿಸಿದ ವಾಹನವು ಸಾಗರದ ಟೌನ್ ನ ಕಡೆಯಿಂದ ಬರುವುದು ಕಂಡು ಬಂದಿತು. ಕೂಡಲೇ ನಾನು ಸಿಬ್ಬಂದಿ ಸಹಾಯದಿಂದ ವಾಹನವನ್ನು ತಡೆದು ನಿಲ್ಲಿಸಿದೆ. ಸದರಿ ದ್ವಿಚಕ್ರ ವಾಹನದ ಪೆಟ್ರೋಲ್ ಟ್ಯಾಂಕ್ ನ ಮೆಲೆ ಬಿಳಿ ಬಣ್ಣದ ಕೈ ಚೀಲ ಇರುವುದು ಕಂಡು ಬಂದಿತು. ಆರೋಪಿತನನ್ನು ಹಿಡಿದು ಸದರಿ ಕೈ ಚೀಲದಲ್ಲಿ ಏನು ಇದೆ ಎಂದು ವಿಚಾರಣೆ ಮಾಡಿದಾಗ ಮಧ್ಯದ ಟೆಟ್ರಾ ಪ್ಯಾಕ್ ಗಳು ಇವೆ ಎಂದು

ಆರೋಪಿತನು ತಿಳಿಸಿದನು. ಆರೋಪಿತನ ವಾಹನವನ್ನು ಶೋಧನೆ ಮಾಡಲು ಸಮಯಾವಕಾಶದ ಅಭಾವ ಇದ್ದ ಕಾರಣ ಸ್ಥಳದಲ್ಲಿಯೇ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿಕೊಂಡೆ. ಆನಂತರ ಆರೋಪಿತನ ವಾಹನದ ಪೆಟ್ರೋಲ್ ಟ್ಯಾಂಕಿನ ಮೇಲಿದ್ದ ಕೈ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್ ಒರಿಜಿನಲ್ ಚಾಯ್ಸ್ ವಿಸ್ಕಿಯ 96 ಟೆಟ್ರಾ ಪ್ಯಾಕ್ ಗಳು ಇರುವುದು ಕಂಡು ಬಂದಿತು. ಸದರಿ ಮದ್ಯವನ್ನು ಸಾಗಾಟ ಮಾಡಲು ಪರವಾನಗಿ ಬಗ್ಗೆ ಕೇಳಲಾಗಿ ಆರೋಪಿತನು ಯಾವುದೇ ಪರವನಾಗಿ ಇಲ್ಲ ಎಂದು ತಿಳಿಸಿದನು. ಸದರಿ ಮದ್ಯದ ಟೆಟ್ರಾ ಪ್ಯಾಕ್ ಗಳು ಹಾಗೂ ದ್ವಿ ಚಕ್ರ ವಾಹನವನ್ನು ಕೂಡಲೇ ಅಮಾನತ್ತು ಪಡಿಸಿಕೊಂಡು ಪಂಚನಾಮೆ ಮಾಡಿರುತ್ತೇನೆ. ಎಲ್ಲಾ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಇಲಾಖಾ ಕ್ರಮದಂತೆ ಜಪ್ತು ಪಡಿಸಿಕೊಂಡು ಸೀಲ್ ಮಾಡಿರುತ್ತೇನೆ. ಆರೋಪಿತನಿಗೆ ನೋಟೀಸ್ ಅನ್ನು ಜಾರಿ ಮಾಡಿ, ಕಚೇರಿಗೆ ಹಾಜರಾಗುವಂತೆ ಸೂಚಿಸಿರುತ್ತೇನೆ. ನಂತರ ಠಾಣೆಯಲ್ಲಿ ಸರ್ಕಾರದ ಪರವಾಗಿ ಸ್ವ ದೂರನ್ನು ತಯಾರಿಸಿ ಪ್ರ.ವ. ವರದಿಯನ್ನು ತಯಾರಿಸಿರುತ್ತೇನೆ. ನಂತರ ಈ ಪ್ರಕರಣದ ಕಡತ ಹಾಗೂ ಮು.ಮಾಲನ್ನು ಮುಂದಿನ ತನಿಖೆಗಾಗಿ ಚಾ.ಸಾ 10 ರವರಿಗೆ ಹಸ್ತಾಂತರಿಸಿರುತ್ತೇನೆ.

**3.** ಶೋಧನಾ ಸಮುಚಿತ ಆಧಾರವನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು, ಸ್ಥಳ ಪಂಚನಾಮೆಯನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು, ಮಾದರಿ ಸೀಲು ಪತ್ರವನ್ನು ನಿಪಿ–3 ಎಂದು, ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು, ದೂರನ್ನು ನಿಪಿ–4 ಎಂದು, ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು, ಪ್ರ.ವ. ವರದಿಯನ್ನು ನಿಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿಪಿ–5(ಎ) ಎಂದು, ಫೋಟೋವನ್ನು ನಿಪಿ–6 ಎಂದು, ಸಿಡಿಯನ್ನು ನಿಪಿ–7 ಎಂದು ಗುರುತಿಸಲಾಯಿತು. ಸಾಕ್ಷಿಯು 96 ಟೆಟ್ರಾ ಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾಲು–1 ಎಂದು ಗುರುತಿಸಲಾಯಿತು. ಆರೋಪಿತನನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಡಿ.ಎಂ.ಆರ್ ರವರಿಂದಃ–</u>**

**1.** ದಿನಾಂಕ 04.05.2024 ರಂದು ಸಾಗರ ಟೌನ್ ನಲ್ಲಿ ನಾನು ಚಾ.ಸಾ 4 ಮತ್ತು 5 ರವರು ಹಾಗೂ ವಾಹನ ಚಾಲಕನೊಂದಿಗೆ ಇಲಾಖಾ ವಾಹನದ ನೊಂದಣಿ ಸಂಖ್ಯೆ ಕೆಎ–14/ಜಿ–1065 ರಲ್ಲಿ ಗಸ್ತು ಮಾಡುತ್ತಿದ್ದೆ. ಆ ದಿನ ನಾನು ಸಿಬ್ಬಂದಿಯೊಂದಿಗೆ ಸಾಗರ ಟೌನ್ ನಲ್ಲಿ ಗಸ್ತು ಮಾಡಿದ ಕುರಿತು ದಿನಚರಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. ಬಾತ್ಮೀ ಬಂದಾಗ ನಾನು ನ್ಯಾಯಾಲಯದ ಮುಂದೆ ಇರುವ ಖಾಸಗಿ ಬಸ್ ನಿಲ್ದಾಣ ಬಳಿ ಇದ್ದೆ. ಆಗ ಸಮಯ ಸಂಜೆ 07.50

ಗಂಟೆಯಾಗಿತ್ತು. ಚಾ.ಸಾ 2 ಮತ್ತು 3 ರವರು ಸಿಗಂಧೂರು ಕ್ರಾಸ್ ನ ಬಲಬದಿಯಲ್ಲಿ ನಿಂತಿದ್ದರು. ಆಗ ಸದರಿ ಸರ್ಕಲ್ ನಲ್ಲಿ ಸುಮಾರು 6 ಜನರು ಇದ್ದರು. ಸದರಿ ಸ್ಥಳದಲ್ಲಿ ನಿಂತಿದ್ದ 6 ಜನರನ್ನು ಕರೆದು ವಿಚಾರಣೆ ಮಾಡಿದಾಗ ಚಾ.ಸಾ 2 ಮತ್ತು 3 ರವರು ಪಂಚನಾಮೆಗೆ ಸಹಕರಿಸಲು ಒಪ್ಪಿದರು.

**2.** ಸಿಗಂಧೂರು ಕ್ರಾಸ್ ನಿಂದ ಘಟನಾ ಸ್ಥಳವು ಸುಮಾರು 2 ಕಿ.ಮೀ ದೂರ ಇದೆ. ಪಂಚರನ್ನು ಕರೆದುಕೊಂಡು ಕೂಡಲೇ ಹೊರಟು ಘಟನಾ ಸ್ಥಳಕ್ಕೆ ಸುಮಾರು 08.15 ಗಂಟೆಗೆ ಹೋದೆವು. ಸುಮಾರು 15 ನಿಮಿಷಗಳವರೆಗೆ ಗಣಪತಿ ಕೆರೆಯ ಬಳಿ ರಸ್ತೆಗಾವಲು ಮಾಡಿದೆವು. ಆರೋಪಿತನನ್ನು ನಾವು ಘಟನಾ ಸ್ಥಳದಿಂದ ಸುಮಾರು 20 ಅಡಿ ದೂರದಿಂದ ನೋಡಿ, ಹತ್ತಿರ ಬಂದಾಗ ತಡೆದು ನಿಲ್ಲಿಸಿದೆವು.

**3.** ಆ ದಿನ ನಾನು ಮತ್ತು ನನ್ನ ಸಿಬ್ಬಂದಿ ಸಮವಸ್ತ್ರದಲ್ಲಿ ಇರಲಿಲ್ಲ. ರಸ್ತೆಗಾವಲು ಮಾಡುತ್ತಿದ್ದಾಗ ನಮ್ಮೊಂದಿಗೆ ಚಾ.ಸಾ 2 ಮತ್ತು 3 ರವರು ಸಹ ಇದ್ದರು. ಬಿ ಹೆಚ್ ರಸ್ತೆಯಲ್ಲಿ ಸಾಗರದಿಂದ ಹೋಗುವಾಗ ರಸ್ತೆಯ ಎಡಬದಿಯಲ್ಲಿ ನಾವು ರಸ್ತೆಗಾವಲು ಮಾಡುತ್ತಿದ್ದೆವು. ದಿನಾಂಕ 04.05.2024 ರಂದು ಸಂತೆ ನಡೆಯುತ್ತಿರಲಿಲ್ಲ. ಆ ದಿನ ಯಾವ ವಾರ ಇತ್ತು ಎಂದು ಹೇಳಲು ಆಗುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.